ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ. ಎಂ. ಎಫ್. ಸಿ.ರವರ
ನ್ಯಾಯಾಲಯ, ಮಡಿಕೇರಿ.

**ಒ.ಎಸ್.ನಂಃ 1/2022**

ಪಿಡಬ್ಲ್ಯುಃ -1

ದಿನಾಂಕಃ 24.02.2025 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿಗಳ ಪರ ಶ್ರೀ. ಕೆ ಎಂ ಕೆ ವಕೀಲರಿಂದಃ-

46. ನಮ್ಮ ಅಣ್ಣ ತಮ್ಮಂದಿರ ನಡುವೆ ವಿಭಾಗ ಪತ್ರ ಆಗುವ ಮೊದಲು ನಮ್ಮ ಬಾಣೆ ಜಾಗಗಳಲ್ಲಿ ಕಾಡು ಬೆಳೆದಿತ್ತು ಎಂದರೆ ಸರಿ. ಆದರೆ ಸ್ವಲ್ಪ ಜಾಗದಲ್ಲಿ ತೋಟ ಮಾಡಲಾಗಿತ್ತು. ವಿಭಾಗದ ನಂತರ ನಮ್ಮ ಅಣ್ಣ ತಮ್ಮಂದಿರು ಸ್ವಲ್ಪ ಸ್ವಲ್ಪ ಬಾಣೆ ಜಾಗವನ್ನೇ ಕಾಫಿ ಕೃಷಿ ಮಾಡಲು ಅಭಿವೃದ್ಧಿ ಪಡಿಸಿದ್ದಾರೆ. ನನ್ನ ಸಹೋದರ ಪೊನ್ನಪ್ಪರವರಿಗೆ ಸೇರಿದ ಬಾಣೆಯ ಕಾಡು ಜಾಗವನ್ನು ಹೊರತು ಪಡಿಸಿ ಉಳಿದವರೆಲ್ಲಾ ಕಾಫಿ ಕೃಷಿ ಮಾಡುತ್ತಿದ್ದೇವೆ ಎಂದರೆ ಪೊನ್ನಪ್ಪ ಸಹ ಕಾಫಿ ಕೃಷಿ ಮಾಡುತ್ತಿದ್ದಾರೆ.

47. ಪ್ರತಿವಾದಿಯ ಕಾಫಿ ತೋಟದಲ್ಲಿ ನನಗೆ ತಿರುಗಾಡಲು ಆದಿ ಭೋಗದ(easement) ದಾರಿ ಹಕ್ಕು ಇದೆ ಎಂದು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಗ್ರಾಮ ನಕಾಶೆಯಲ್ಲಿ ಗುರುತು ಮಾಡಲಾದ ರಸ್ತೆ ಜರಿದು 15 ಅಡಿ ಮುಂದೆ ಹೋಗಿದೆ ಎಂದು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಯ ಕಾಫಿ ತೋಟದಲ್ಲಿ ಇರುವ ರಸ್ತೆಯನ್ನು 80 ವರ್ಷದಿಂದ ನಾನು ಉಪಯೋಗಿಸುತ್ತಾ ಬಂದಿದ್ದೇನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಗೆ ಸೇರಿದ ಜಮೀನಿನಲ್ಲಿ ಇರುವಂತಹ ರಸ್ತೆ ಪ್ರತಿವಾದಿಯ ಖಾಸಗಿ ರಸ್ತೆ ಹಾಗೂ ಆ ರಸ್ತೆಯ ಮೇಲೆ ಯಾವುದೇ ರೀತಿಯ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಗ್ರಾಮ ನಕಾಶೆಯಲ್ಲಿರುವ ರಸ್ತೆಯನ್ನು ನಾನು ಖಬ್ಜಾ ಮಾಡಿ ಕಾಫಿ ತೋಟ ಮಾಡಿದ್ದೇನೆ ಹಾಗೂ ಅದನ್ನು ಉಳಿಸಿಕೊಳ್ಳುವ ಸಲುವಾಗಿ ಈಗ ಪ್ರತಿವಾದಿಯ ಆಸ್ತಿಯಲ್ಲಿರುವ ರಸ್ತೆಯಲ್ಲಿ ಹಕ್ಕು ಕೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪ್ರತಿವಾದಿಗೆ ಸೇರಿದ ಜಾಗದ ರಸ್ತೆಯಲ್ಲಿ ನಾವು 80 ವರ್ಷದಿಂದ ರಸ್ತೆ ಬಳಸುತ್ತಿದ್ದೇವೆ ಎಂದು ಹೇಳುವ ಯಾವುದೇ ದಾಖಲೆಗಳು ಇಲ್ಲ ಎಂದರೆ ಸರಿ. ಆದರೆ ಅದೇ ರಸ್ತೆಯನ್ನು ಬಳಸುತ್ತಿದ್ದೇವೆ. ಗ್ರಾಮ ನಕಾಶೆಯಲ್ಲಿರುವ ಸ್ಥಳದಲ್ಲಿ ಬೆಳೆದಿರುವ ಕಾಫಿ ಗಿಡವನ್ನು ಕಡಿದು ರಸ್ತೆ ಮಾಡಿಕೊಂಡು ರಸ್ತೆ ಮಾಡಿಕೊಂಡು ತಿರುಗಾಡಲು ನನಗೆ ಯಾವುದೇ ಸಮಸ್ಯೆ ಇಲ್ಲ ಎಂದರೆ ಗ್ರಾಮ ನಕಾಶೆಯನ್ನು ಪಾಲು ಮಾಡಿ ನನಗೆ ಆಸ್ತಿ ಲೆಕ್ಕದಲ್ಲಿ ಕೊಟ್ಟಿರುತ್ತಾರೆ. ನಾನು ಪ್ರತಿವಾದಿಯ ಜಾಗದಲ್ಲಿ ಹಕ್ಕನ್ನು ಪ್ರತಿಪಾದಿಸುವ ಸಲುವಾಗಿ ಸುಳ್ಳು ದಾಖಲೆಗಳನ್ನು ನೀಡಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನ್ಯಾಯಾಲಯದ ಮುಂದೆ ಹಾಜರು ಪಡಿಸಿರುವ ಭಾವಚಿತ್ರಗಳನ್ನು ನನ್ನ ಅನುಕೂಲಕ್ಕೆ ತಕ್ಕಂತೆ ಸೃಷ್ಟಿ ಮಾಡಿ ಹಾಜರು ಪಡಿಸಿದ ಭಾವಚಿತ್ರಗಳು ಎಂದರೆ ಸರಿಯಲ್ಲ. ನಾನು ಪ್ರತಿವಾದಿಗಳ ಮೇಲೆ ನಾನು ಸುಳ್ಳು ದೂರು ನೀಡಿದ್ದೇನೆ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ. ಹೇ. ಕೇ. ಸರಿ ಇದೆ.

ಸಹಿ/-

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ. ಎಂ. ಎಫ್. ಸಿ., ಮಡಿಕೇರಿ.**